**Akashvani : Bangalore**
**National Bulletin In Kannada**
**30.11.2024 / 19.35 hrs**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

**೧. ಮಹಾರಾಷ್ಟ್ರ ವಿಧಾನಸಭೆಯ ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕ ಕ್ರಮ- ಕೇಂದ್ರ ಚುನಾವಣಾ ಆಯೋಗ ಸ್ಪಷ್ಟನೆ**

**೨. ಭಾರತ-ಸಿಂಗಾಪುರ ಜಂಟಿ ಮಿಲಿಟರಿ ಸಮರಾಭ್ಯಾಸ 'ಅಗ್ನಿ ವಾರಿಯರ್' ಸಂಪನ್ನ**

**೩. ಡಿಸೆಂಬರ್ ೬ ರಂದು ನವದೆಹಲಿಯಲ್ಲಿ ಅಷ್ಟಲಕ್ಷ್ಮೀ ಮಹೋತ್ಸವ-೨೦೨೪ ಉದ್ಘಾಟನೆ**

**೪. ಸಯ್ಯದ್ ಮೋದಿ ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಪಂದ್ಯಾವಳಿ; ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಫೈನಲ್ ಪ್ರವೇಶಿಸಿದ ಪಿ.ವಿ.ಸಿಂಧೂ**

**<><*<><>*><>**

ಮಹಾರಾಷ್ಟ್ರ ವಿಧಾನಸಭೆಯ ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕ ಕ್ರಮಗಳನ್ನು ಅನುಸರಿಸಲಾಗಿದೆ ಎಂದು ಕೇಂದ್ರ ಚುನಾವಣಾ ಆಯೋಗ ಇಂದು ಸ್ಪಷ್ಟಪಡಿಸಿದೆ. ಮಹಾರಾಷ್ಟ್ರ ಚುನಾವಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷದ ದೂರು ಆಧರಿಸಿ ಮಧ್ಯಂತರ ಪ್ರತಿಕ್ರಿಯೆ ನೀಡಿರುವ ಕೇಂದ್ರ ಚುನಾವಣಾ ಆಯೋಗವು, ಎಲ್ಲ ಪ್ರಕ್ರಿಯೆಗಳು ಪಾರದರ್ಶಕವಾಗಿದ್ದು, ನ್ಯಾಯಸಮ್ಮತವಾಗಿವೆ ಎಂದು ತಿಳಿಸಿದೆ. ಅಲ್ಲದೆ, ಡಿಸೆಂಬರ್ ೩ರಂದು ಈ ಕುರಿತು ಚರ್ಚೆ ನಡೆಸಲು ಅವಕಾಶ ನೀಡಿದ್ದು, ಚುನಾವಣೆಗೆ ಸಂಬಂಧಿಸಿದ ಎಲ್ಲ ಹಂತಗಳ ಪ್ರಕ್ರಿಯೆಗಳನ್ನು ಪಕ್ಷಗಳ ಉಮೇದುವಾರರು ಮತ್ತು ಅವರ ಪ್ರತಿನಿಧಿಗಳ ಒಳಗೊಳ್ಳುವಿಕೆಯಲ್ಲೇ ನಡೆಸಲಾಗಿದೆ. ಮತದಾನದ ಅಂಕಿ-ಅಂಶಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಿಲ್ಲ. ಎಲ್ಲ ಅಭ್ಯರ್ಥಿಗಳ ಮತಗಟ್ಟೆವಾರು ದತ್ತಾಂಶ ಲಭ್ಯವಿದ್ದು, ಪರಿಶೀಲನೆ ನಡೆಸಬಹುದಾಗಿದೆ ಎಂದು ತಿಳಿಸಿದೆ.

**<><*<><>*><>**

ಭಾರತೀಯ ಸಶಸ್ತ್ರ ಪಡೆಗಳು ಮತ್ತು ಸಿಂಗಾಪುರ ಸಶಸ್ತ್ರ ಪಡೆಗಳ ನಡುವಿನ ಜಂಟಿ ಮಿಲಿಟರಿ ಸಮರಾಭ್ಯಾಸ 'ಅಗ್ನಿ ವಾರಿಯರ್' ೨೦೨೪ ಇಂದು ಮಹಾರಾಷ್ಟ್ರದ ದೇವಲಾಲಿಯಲ್ಲಿ ಮುಕ್ತಾಯಗೊಂಡಿತು. ಮೂರು ದಿನಗಳ ಈ ಸಮರಾಭ್ಯಾಸ ನವೆಂಬರ್ ೨೮ ರಂದು ಪ್ರಾರಂಭವಾಗಿತ್ತು. ಉಭಯ ದೇಶಗಳ ಸಮಾರಾಭ್ಯಾಸದ ೧೩ ನೇ ಆವೃತ್ತಿಯಲ್ಲಿ ಸಿಂಗಾಪುರದ ಫಿರಂಗಿದಳದ ೧೮೨ ಸಿಬ್ಬಂದಿ ಮತ್ತು ಭಾರತೀಯ ಸೇನೆಯ ಫಿರಂಗಿದಳದ ೧೧೪ ಸಿಬ್ಬಂದಿ ಭಾಗವಹಿಸಿದ್ದರು. ವಿಶ್ವಸಂಸ್ಥೆಯ ಒಡಂಬಡಿಕೆಯ ಅಡಿಯಲ್ಲಿ ಬಹುರಾಷ್ಟ್ರೀಯ ಶಕ್ತಿಯಾಗಿ ಸಮಬಲ ಸಾಧಿಸಲು ಕವಾಯತು ಮತ್ತು ಕಾರ್ಯವಿಧಾನಗಳ ಪರಸ್ಪರ ತಿಳುವಳಿಕೆಯನ್ನು ಹೆಚ್ಚಿಸುವುದು ಸಮರಾಭ್ಯಾಸದ ಗುರಿಯಾಗಿದೆ. ಈ ಸಮರಾಭ್ಯಾಸವು ಜಂಟಿ ಅಗ್ನಿಶಾಮಕ ಯೋಜನೆ, ಕಾರ್ಯಗತಗೊಳಿಸುವಿಕೆ ಮತ್ತು ಎರಡೂ ಸೇನೆಗಳ ಫಿರಂಗಿದಳದಿಂದ ಹೊಸ ತಲೆಮಾರಿನ ಸಲಕರಣೆಗಳ ಬಳಕೆಯನ್ನು ಪ್ರದರ್ಶಿಸಿತು. ಸೇನೆಯ ಫಿರಂಗಿದಳದ ಮಹಾನಿರ್ದೇಶಕ ಲೆಫ್ಟಿನೆಂಟ್ ಜನರಲ್ ಅದೋಶ್ ಕುಮಾರ್, ಕಮಾಂಡೆಂಟ್ ಸ್ಕೂಲ್ ಆಫ್ ಆರ್ಟಿಲರಿ ಲೆಫ್ಟಿನೆಂಟ್ ಜನರಲ್ ಎನ್.ಎಸ್ ಸರ್ನಾ ಮತ್ತು ಸಿಂಗಾಪುರದ ಸಶಸ್ತ್ರ ಪಡೆಗಳ ಮುಖ್ಯ ಸೇನಾ ಫಿರಂಗದಳದ ಅಧಿಕಾರಿ ಕರ್ನಲ್ ಒಂಗ್ ಚಿಯು ಪರಂಗ್ ಸಮರಾಭ್ಯಾಸಕ್ಕೆ ಸಾಕ್ಷಿಯಾದರು.

**<><*<><>*><>**

ನವದೆಹಲಿಯ ಭಾರತ್ ಮಂಟಪಂನಲ್ಲಿ ಡಿಸೆಂಬರ್ ೬ ರಂದು ಮೂರು ದಿನಗಳ ಅಷ್ಟಲಕ್ಷ್ಮೀ ಮಹೋತ್ಸವ ೨೦೨೪ ಅನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ಉತ್ಸವವು ಎಲ್ಲಾ ಎಂಟು ಈಶಾನ್ಯ

ರಾಜ್ಯಗಳಾದ ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ತ್ರಿಪುರಾ ಮತ್ತು ಸಿಕ್ಕಿಂ ನ ಸಾಂಸ್ಕೃತಿಕ, ನೈಸರ್ಗಿಕ ಮತ್ತು ಕರಕುಶಲ ಸಂಪತ್ತನ್ನು ಪ್ರದರ್ಶಿಸುತ್ತದೆ. ನವದೆಹಲಿಯಲ್ಲಿ ಸಿದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಈಶಾನ್ಯ ಪ್ರದೇಶದ ಅಭಿವೃದ್ಧಿ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ, ಈ ಕಾರ್ಯಕ್ರಮವು ಈಶಾನ್ಯ ಭಾರತ ಮತ್ತು ರಾಷ್ಟ್ರದ ಉಳಿದ ಭಾಗಗಳ ನಡುವಿನ ಸಾಂಸ್ಕೃತಿಕ ಮತ್ತು ಆರ್ಥಿಕ ಅಂತರವನ್ನು ಕಡಿಮೆ ಮಾಡುತ್ತದೆ. ಈ ಉತ್ಸವ ಈಶಾನ್ಯಗಳನ್ನು ದೇಶದ ಅಭಿವೃದ್ಧಿಶೀಲ ರಾಜ್ಯಗಳನ್ನಾಗಿಸುವ ದೃಷ್ಟಿಕೋನದ ಭಾಗವಾಗಿದೆ ಎಂದು ಹೇಳಿದರು. ಮಹೋತ್ಸವವು ಸಾಂಸ್ಕೃತಿಕ ಕಾರ್ಯಕ್ರಮಗಳು, ಕರಕುಶಲ ವಸ್ತುಗಳ ನೇರ ಪ್ರದರ್ಶನಗಳು, ತಾಂತ್ರಿಕ ಅವಧಿಗಳು, ಖರೀದಿದಾರ-ಮಾರಾಟಗಾರರ ಸಭೆಗಳು ಮತ್ತು ಹೂಡಿಕೆ ಕೇಂದ್ರಿತ ಸಭೆಗಳು ಆಯೋಜಿಸಲಾಗಿದೆ. ಈ ಪ್ರದೇಶದ ೨೧೦ ರೈತರು ಮತ್ತು ಕುಶಲಕರ್ಮಿಗಳ ಉತ್ಪನ್ನಗಳು ಮತ್ತು ಕಲೆಯನ್ನು ಪ್ರದರ್ಶಿಸುವ ಗ್ರಾಮೀಣ ಹಾತ್ ಬಜಾರ್ ಉತ್ಸವದ ಆಕರ್ಷಣೆಯಾಗಿದೆ ಎಂದು ನಮ್ಮ ಬಾತ್ಮೀದಾರರು ವರದಿ ಮಾಡಿದ್ದಾರೆ.

**<><*<><>*><>**

ಗುಜರಾತ್‌ಗೆ ಒಂದು ದಿನದ ಪ್ರವಾಸದಲ್ಲಿರುವ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ಇಂದು ಸೂರತ್‌ನ ಕಿಮ್‌ನಲ್ಲಿರುವ ಬುಲೆಟ್ ಟ್ರೈನ್ ಟ್ರ್ಯಾಕ್ ಸ್ಲ್ಯಾಬ್ ಉತ್ಪಾದನಾ ಘಟಕಕ್ಕೆ ಭೇಟಿ ನೀಡಿ, ಘಟಕದ ಕಾರ್ಯಾಚರಣೆಯನ್ನು ಪರಿಶೀಲಿಸಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅಶ್ವಿನಿ ವೈಷ್ಣವ್, ಈ ಘಟಕವು ದೇಶದ ಅತಿದೊಡ್ಡ ರೈಲು ಟ್ರ್ಯಾಕ್ ಸ್ಲ್ಯಾಬ್ ಉತ್ಪಾದನಾ ಸೌಲಭ್ಯವಾಗಿದ್ದು, ನಿಖರತೆ ಮತ್ತು ತಂತ್ರಜ್ಞಾನಕ್ಕೆ ಹೆಸರುವಾಸಿಯಾಗಿದೆ ಎಂದರು. ಈ ಸೌಲಭ್ಯವು ಮುಂಬರುವ ವರ್ಷಗಳಲ್ಲಿ, ದೇಶದ ಭವಿಷ್ಯದ ವಿವಿಧ ನಿರ್ಮಾಣ ಯೋಜನೆಗಳಿಗೆ ಅತ್ಯಂತ ಪ್ರಯೋಜನಕಾರಿಯಾಗಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

**<><*<><>*><>**

ಒಡಿಶಾಸ ಭುವನೇಶ್ವರದಲ್ಲಿ ನಡೆಯುತ್ತಿರುವ ಅಖಿಲ ಭಾರತ ಪೊಲೀಸ್ ಮಹಾನಿರ್ದೇಶಕರು ಹಾಗೂ ಮಹಾನಿರೀಕ್ಷಕರ ಸಮ್ಮೇಳನದಲ್ಲಿ ಇಂದು ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದಾರೆ. ಮೂರು ದಿನಗಳ ಸಮ್ಮೇಳನ ನಿನ್ನೆಯಿಂದ ಆರಂಭಗೊಂಡಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ, ನಿನ್ನೆ ಸಮ್ಮೇಳನವನ್ನು ಉದ್ಘಾಟಿಸಿದರು. ಭಯೋತ್ಪಾದನೆ ನಿಗ್ರಹ, ನಕ್ಸಲ್ ಉಗ್ರವಾದ, ಕರಾವಳಿ ಭದ್ರತೆ, ಹೊಸ ಕ್ರಿಮಿನಲ್ ಕಾನೂನುಗಳು, ಮಾದಕ ವಸ್ತುಗಳು ಸೇರಿದಂತೆ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಪ್ರಮುಖ ಅಂಶಗಳನ್ನು ಸಮ್ಮೇಳನದಲ್ಲಿ ಚರ್ಚಿಸಲಾಗುತ್ತಿದೆ. ವಿಶೇಷ ಸೇವೆಗಾಗಿ ಪೊಲೀಸ್ ಅಧಿಕಾರಿಗಳಿಗೆ ರಾಷ್ಟ್ರಪತಿ ಪೊಲೀಸ್ ಪದಕಗಳನ್ನು ಸಮ್ಮೇಳನದಲ್ಲಿ ಪ್ರದಾನ ಮಾಡಲಾಗುತ್ತದೆ.

**<><*<><>*><>**

ಮಹಾರಾಷ್ಟ್ರ ಚುನಾವಣಾ ಫಲಿತಾಂಶ ಪ್ರಕಟವಾಗಿ ಒಂದು ವಾರ ಕಳೆದರೂ ಮುಂದಿನ ಮುಖ್ಯಮಂತ್ರಿ ಯಾರಾಗಲಿದ್ದಾರೆ ಎಂಬುದು ಯಕ್ಷಪ್ರಶ್ನೆಯಾಗಿ ಉಳಿದಿದೆ. ನೂತನ ಸರ್ಕಾರ ರಚನೆ ನಿಟ್ಟಿನಲ್ಲಿ ಮಹಾಯುತಿ ಮೈತ್ರಿಕೂಟದ ನಾಯಕರು ಮುಂಬೈ ಮತ್ತು ದೆಹಲಿಯಲ್ಲಿ ಸರಣಿ ಸಭೆಗಳನ್ನು ನಡೆಸಿದರು. ಆದರೂ ಈ ವಿಷಯವಾಗಿ ಅಂತಿಮ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲ. ಬಿಜೆಪಿ ಮತ್ತು ಶಿವಸೇನೆಯ ಮೂಲಗಳ ಪ್ರಕಾರ, ಡಿಸೆಂಬರ್ ೫ ರಂದು ಮುಂಬೈ ಆಜಾದ್ ಮೈದಾನದಲ್ಲಿ ನೂತನ ಮುಖ್ಯಮಂತ್ರಿಯ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯಲಿದೆ ಎನ್ನಲಾಗಿದೆ.

೨೮೮ ಸದಸ್ಯರ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಮಹಾಯುತಿ ಮೈತ್ರಿಕೂಟದ ಮಿತ್ರಪಕ್ಷಗಳಾದ ಬಿಜೆಪಿ ೧೩೨, ಶಿವಸೇನೆ ೫೭ ಮತ್ತು ಎನ್‌ಸಿಪಿ ೪೧ ಸ್ಥಾನಗಳಲ್ಲಿ ಭರ್ಜರಿ ಜಯ ಗಳಿಸಿತು.

**<><*<><>*><>**

ಐಎನ್‌ಎಸ್ ವಿಕ್ರಮಾದಿತ್ಯದ ನವೀಕರಣಕ್ಕಾಗಿ ಕೊಚ್ಚಿ ಶಿಪ್‌ಯಾರ್ಡ್ ಲಿಮಿಟೆಡ್‌ನೊಂದಿಗೆ ೧ ಸಾವಿರದ ೨೦೦ ಕೋಟಿ ರೂಪಾಯಿಗಳ ಒಪ್ಪಂದಕ್ಕೆ ರಕ್ಷಣಾ ಸಚಿವಾಲಯ ಸಹಿ ಹಾಕಿದೆ. ಭಾರತದ ಕೈಗಾರಿಕಾ ಪರಿಸರ ವ್ಯವಸ್ಥೆಯನ್ನು ಉತ್ತಮಪಡಿಸಲು ಕೊಚ್ಚಿ ಶಿಪ್‌ಯಾರ್ಡ್ ಲಿಮಿಟೆಡ್ ಅನ್ನು ನಿರ್ವಹಣೆ, ದುರಸ್ತಿ ಮತ್ತು ಕೂಲಂಕಶ ಕೇಂದ್ರವಾಗಿ ಅಭಿವೃದ್ಧಿಪಡಿಸಲು ಈ ಯೋಜನೆಯು ಒಂದು ಪ್ರಮುಖ ಹೆಜ್ಜೆಯಾಗಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ. ೨೦೧೩ ರ ನವೆಂಬರ್‌ನಲ್ಲಿ ಭಾರತೀಯ ನೌಕಾಪಡೆಗೆ ಐಎನ್‌ಎಸ್ ವಿಕ್ರಮಾದಿತ್ಯ ಸೇರ್ಪಡೆಗೊಂಡಿತು.

**<><*<><>*><>**

ಕೇಂದ್ರ ಸರ್ಕಾರ ಮತ್ತು ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ -ಎಡಿಬಿ, ೯.೮ ಕೋಟಿ ಅಮೆರಿಕನ್ ಡಾಲರ್ ಸಾಲದ ಒಪ್ಪಂದಕ್ಕೆ ಸಹಿ ಹಾಕಿದೆ. ರೈತರಿಗೆ ಪ್ರಮಾಣೀಕೃತ ರೋಗ ಮುಕ್ತ ಸಾವಯುವ ಸಾಮಾಗ್ರಿಗಳನ್ನು ಒದಗಿಸಲು ಮತ್ತು ಬೆಳೆ ಇಳುವರಿ, ಗುಣಮಟ್ಟ ಹಾಗೂ ಹವಾಮಾನದ ಪರಿಣಾಮಗಳಿಗೆ ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸಲು ಈ ಒಪ್ಪಂದ ಸಹಕಾರಿಯಾಗಿದೆ. ಈ ಒಪ್ಪಂದಕ್ಕೆ ಆರ್ಥಿಕ ವ್ಯವಹಾರಗಳ ಇಲಾಖೆಯ ಜಂಟಿ ಕಾರ್ಯದರ್ಶಿ ಮತ್ತು ಎಡಿಬಿ ಭಾರತೀಯ ಯೋಜನೆಯ ಉಸ್ತುವಾರಿ ಅಧಿಕಾರಿ ಸಹಿ ಮಾಡಿದ್ದಾರೆ. ಹಣಕಾಸು ಸಚಿವಾಲಯದ ಪ್ರಕಾರ, ಶುದ್ಧ ತೋಟಗಾರಿಕಾ ಯೋಜನೆಯು ಸಸ್ಯ ಆರೋಗ್ಯ ನಿರ್ವಹಣೆಯನ್ನು ಬಲಪಡಿಸುತ್ತದೆ. ಭಾರತದಲ್ಲಿ ತೋಟಗಾರಿಕೆಗಾಗಿ ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲು ನಿಯಂತ್ರಕ ಚೌಕಟ್ಟುಗಳು ಮತ್ತು ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸಲು ತೋಟಗಾರಿಕಾ ಯೋಜನೆಯು ಸಹಕಾರಿಯಾಗಿದೆ. ಯೋಜನೆಯ ಯಶಸ್ಸು ಖಾಸಗಿ ನರ್ಸರಿಗಳು, ಸಂಶೋಧಕರು, ರಾಜ್ಯ ಸರ್ಕಾರಗಳು ಮತ್ತು ಬೆಳೆಗಾರರ ಸಂಘಗಳ ಸಹಯೋಗವನ್ನು ಒಳಗೊಂಡಿರುತ್ತದೆ. ಈ ಯೋಜನೆಯು ಕೀಟಗಳು ಮತ್ತು ರೋಗಗಳ ಮೇಲೆ ಉಂಟಾಗುತ್ತಿರುವ ತಾಪಮಾನದ ಪರಿಣಾಮವನ್ನು ಪರಿಹರಿಸುವ ಮೂಲಕ ಹವಾಮಾನ ಬದಲಾವಣೆಗೆ ಹೊಂದಿಕೊಳ್ಳುವಲ್ಲಿ ರೈತರಿಗೆ ಸಹಾಯ ಮಾಡಲಿದೆ.

**<><*<><>*><>**

ಉತ್ತರ ಪ್ರದೇಶದ ಲಕ್ನೋದಲ್ಲಿ ನಡೆಯುತ್ತಿರುವ ಸಯ್ಯದ್ ಮೋದಿ ಅಂತಾರಾಷ್ಟ್ರೀಯ ಸೂಪರ್-೩೦೦ ಬ್ಯಾಡ್ಮಿಂಟನ್ ಪಂದ್ಯಾವಳಿಯ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಶೆಟ್ಲರ್ ಪಿ.ವಿ.ಸಿಂಧೂ ಫೈನಲ್ ಪ್ರವೇಶಿಸಿದ್ದಾರೆ. ಇಂದು ನಡೆದ ಸೆಮಿಫೈನಲ್ಸ್ ಪಂದ್ಯದಲ್ಲಿ ಅವರು, ಉನ್ನತಿ ಹೂಡ ಅವರನ್ನು ೨೧-೧೨, ೨೧-೯ ಸೆಟ್‌ಗಳಿಂದ ಪರಾಭವಗೊಳಿಸಿದರು. ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಭಾರತದ ತ್ರೀಸಾ ಜೊಲ್ಲಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯು ಫೈನಲ್ ಪ್ರವೇಶಿಸಿದೆ. ಸೆಮಿಫೈನಲ್ಸ್ ಪಂದ್ಯದಲ್ಲಿ ಈ ಜೋಡಿಯು ಥೈಲ್ಯಾಂಡ್‌ನ ಬೆನ್ಯಾಪಾ ಐಮ್ಸಾರ್ಡ್ ಮತ್ತು ನುಂಟಕರ್ನ್ ಐಮ್ಸಾರ್ಡ್ ಜೋಡಿಯನ್ನು ೧೮-೨೧, ೨೧-೧೮, ೨೧-೧೦ ಸೆಟ್‌ಗಳಿಂದ ಪರಾಭವಗೊಳಿಸಿತು. ಇನ್ನೊಂದೆಡೆ, ಮಿಕ್ಸ್‌ಡ್ ಡಬಲ್ಸ್ ವಿಭಾಗದಲ್ಲಿ ಚೀನಾದ ಝೌ ಝಿ ಹಾಂಗ್ ಮತ್ತು ಯೂನ್ ಜಿನ್ ಯಿ ಜೋಡಿ ವಿರುದ್ಧ ೨೧-೧೬, ೨೧-೧೫ ಸೆಟ್‌ಗಳಿಂದ ಸೋಲಿಸಿದ ಭಾರತದ ಧೃವ ಕಪಿಲಾ ಮತ್ತು ತನಿಷಾ ಕ್ರೆಸ್ಟೊ ಜೋಡಿಯು, ಫೈನಲ್ ಪ್ರವೇಶಿಸಿದೆ. ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಭಾರತದ ಶೆಟ್ಲರ್ ಲಕ್ಷ್ಯಸೇನ್ ಮತ್ತು ಜಪಾನ್ ಶೋಗೊ ಒಗಾವ ನಡುವಿನ ಸೆಮಿಫೈನಲ್ಸ್ ಪಂದ್ಯ ಪ್ರಗತಿಯಲ್ಲಿದೆ.

**<><*<><>*><>**

ದುಬೈ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ೧೯ ವರ್ಷದೊಳಗಿನ ಪುರುಷರ ಏಷ್ಯಾಕಪ್ ಪಂದ್ಯಾವಳಿಯ ಗ್ರೂಪ್ ಎ ವಿಭಾಗದ ಏಕದಿನ ಪಂದ್ಯದಲ್ಲಿಂದು ಭಾರತ ತಂಡದ ವಿರುದ್ಧ ಪಾಕಿಸ್ತಾನ ೪೪ ರನ್‌ಗಳಿಂದ ಜಯಗಳಿಸಿದೆ. ಟಾಸ್ ಗೆದ್ದು, ಮೊದಲ ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ನಿಗದಿತ ೫೦ ಓವರ್‌ಗಳಲ್ಲಿ ೭ ವಿಕೆಟ್ ನಷ್ಟಕ್ಕೆ ೨೮೧ ರನ್ ಗಳಿಸಿತು. ಈ ಗುರಿಯನ್ನು ಬೆನ್ನತ್ತಿದ ಭಾರತ ೪೭.೧ ಓವರ್‌ಗಳಲ್ಲಿ ೨೩೭ ರನ್‌ಗಳಿಗೆ ತನ್ನ ಎಲ್ಲಾ ವಿಕೆಟ್‌ಗಳನ್ನು ಕಳೆದುಕೊಂಡಿತು.

**<><*<><>*><>**

ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತದಿಂದ ನಿರ್ಮಾಣವಾಗಿರುವ ಫೆಂಗಲ್ ಚಂಡಮಾರುತ ಇಂದು ಸಂಜೆ ತಮಿಳುನಾಡಿನ ಕಾರೈಕಲ್ ಮತ್ತು ಮಹಾಬಲಿಪುರಂ ನಡುವೆ ಅಪ್ಪಳಿಸಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಇದರ ಪರಿಣಾಮ ತಮಿಳುನಾಡು ಮತ್ತು ಪುದುಚೇರಿಯಲ್ಲಿ ಭಾರೀ ಮಳೆಯಾಗಲಿದ್ದು, ಗಂಟೆಗೆ ೭೦-೮೦ ಕಿ.ಮೀ ವೇಗದಲ್ಲಿ ಗಾಳಿ ಬೀಸಲಿದೆ. ಈಗಾಗಲೇ ತೀವ್ರ ಚಳಿಗಾಳಿಯ ವಾತಾವರಣ ನಿರ್ಮಾಣವಾಗಿದೆ. ಚೆನ್ನೈ ನಗರದಲ್ಲಿ ಈಗಾಗಲೇ ಭಾರೀ ಮಳೆಯಾಗುತ್ತಿದ್ದು, ರಸ್ತೆಗಳು ಜಲಾವೃತವಾಗಿವೆ. ಚಂಡಮಾರುತ ಅಪ್ಪಳಿಸುವ ಪ್ರದೇಶ ಹಾಗೂ ಸುತ್ತಮುತ್ತ ರೆಡ್ ಅಲರ್ಟ್ ಘೋಷಿಸಲಾಗಿದೆ. ಪ್ರವಾಹ ಪರಿಸ್ಥಿತಿ ಎದುರಿಸಲು ತಮಿಳುನಾಡು ಮತ್ತು ಪುದುಚೇರಿ ಆಡಳಿತ ಸಿದ್ಧತೆ ಕೈಗೊಂಡಿದ್ದು, ಕೇಂದ್ರ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆಗಳನ್ನು ನಿಯೋಜಿಸಲಾಗಿದೆ. ಭಾರತೀಯ ನೌಕಾಪಡೆಯೂ ವಿಪತ್ತು ಪರಿಸ್ಥಿತಿ ಎದುರಿಸಲು ಸನ್ನದ್ಧವಾಗಿದೆ. ಈ ಮಧ್ಯೆ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಸೇರಿ ಹಲವು ಪ್ರದೇಶಗಳಲ್ಲಿ ಚಳಿಯ ವಾತಾವರಣವಿದೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>**